Rotary ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD

ಐಶ್ವರ್ಯ
ಸಂಪುಟ: 4 ಸಾಪ್ತಾಹಿಕ ಸಂಚಿಕೆ : 24
ದಿನಾಂಕ: 16.12.2025


Rtn. Francesco Arezzo
R.I. President


Rtn. K. Palaksha
District Governor


Rtn. Anil Kumar
President


Rtn. Krishnappa
Secretary

### ರೋಟರಿ ಜಿಲ್ಲೆ 3182ರ ಜಿಲ್ಲಾ ಗವರ್ನರ್

# ರೊ. ಪಾಲಾಕ್ಷ ಕೇಶವಯ್ಯನವರಿಗೆ ಹೃದಯಸ್ಪರ್ಶಿ ಸ್ವಾಗತ

ರೋಟರಿ ಐಸಿರಿಗೆ ಇಂದು ಬಹಳ ಮಹತ್ವಪೂರ್ಣ ದಿನ. ರೋಟರಿ ಜಿಲ್ಲೆ 3182ರ ಜಿಲ್ಲಾ ಗವರ್ನರ್ ರೊ.ಪಾಲಾಕ್ಷ ಕೆ. ಯವರು ವಾಡಿಕೆಯಂತೆ ಇಂದು ನಮ್ಮ ಕ್ಲಬ್ಬಿಗೆ ಅಧಿಕೃತ ಭೇಟಿ ನೀಡುತ್ತಿದ್ದಾರೆ. ಈ ಸುಸಂದರ್ಭದಲ್ಲಿ ರೋಟರಿ ಐಸಿರಿಯು ಹಲವಾರು ಜನಪರ ಕಾರ್ಯಕ್ರಮಗಳ ಲೋಕಾರ್ಪಣೆಯನ್ನು ಹಮ್ಮಿಕೊಂಡಿದೆ. ಪರ್ಕಳ ಪರಿಸರದಲ್ಲಿ ಸೇವೆಸಲ್ಲಿಸುತ್ತಿರುವ ಹತ್ತುಮಂದಿ ಪೌರ ಕಾರ್ಮಿಕರಿಗೆ ಸನ್ಮಾನ, ಶೆಟ್ಟಿಬೆಟ್ಟುವಿನ ಸರಕಾರಿ ಸಂಯುಕ್ತ ಪ್ರೌಢಶಾಲೆಯ ವಿದಾರ್ಥಿಗಳಿಗೆ ಉತ್ತಮ ಅಂಕಗಳಿಕೆಗೆ ಸಹಕಾರಿಯಾಗಲು ಟೇಬಲ್ ಲ್ಯಾಂಪ್ ಕೊಡುಗೆ, ಸಸ್ಯವನ, ರಸ್ತೆ ಸುರಕ್ಷತಾ ಯೋಜನೆಯಂತೆ ತಿರುವಿನಲ್ಲಿ ಅಪಘಾತ ತಪ್ಪಿಸಲು ಅಳವಡಿಸಿದ ದೊಡ್ಡ ಕನ್ನಡಿ ಲೋಕಾರ್ಪಣೆ, 80ನೇ ಬಡಗಬೆಟ್ಟು ಸರಕಾರಿ ಮಾದರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಊಟದ ತಟ್ಟೆಗಳನ್ನು ಶುಚಿಯಾಗಿ ಶೇಖರಿಸಿಡಲು ಸ್ಟೀಲ್ ರೇಕ್ ಹಸ್ತಾಂತರ, ರೋಟರಿ ಐಸಿರಿಯ



"ನಮ್ಮ ನಡೆ ಕೃಷಿಯ ಕಡೆ" ಧ್ಯೇಯಕ್ಕೆ ಪೂರಕವಾಗಿ ಕೃಷಿಕರಿಗೆ ಸನ್ಮಾನ, ಅವಶ್ಯ ಚಿಕಿತ್ಸೆಗೆ ಧನಸಹಾಯ, ವಿದ್ಯಾರ್ಥಿ ವೇತನ ಕೊಡುಗೆ, ದ ರೋಟರಿ ಫೌಂಡೇಶನ್ ಸೇವಾನಿಧಿಗೆ ಕೊಡುಗೆ ಹೀಗೆ ಹತ್ತು ಹಲವಾರು ಕಾರ್ಯಕ್ರಮ ಗಳನ್ನು ಹಮ್ಮಿಕೊಂಡಿದೆ.

ಸಾಯಂಕಾಲ 6.30ರಿಂದ ಮಣಿಪಾಲ ಈಶ್ವರನಗರದ ವೈಷ್ಣವಿ ಸಭಾಭವನದಲ್ಲಿ ಸಾರ್ವಜನಿಕ ಸಭೆಯನ್ನು ಏರ್ಪಡಿಸ ಲಾಗಿದ್ದು, ಊರ ಗಣ್ಯ ನಾಗರಿಕರು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ರೋಟರಿ ಕುಟುಂಬದ ಸಮಾಗಮ, ಸಹಭೋಜನ ಈ ಕಾರ್ಯಕ್ರಮದಲ್ಲಿರಲಿದೆ.

ರಸಾಯನ ಶಾಸ್ತ್ರದಲ್ಲಿ ಎಂ. ಎಸ್ಸಿ. ಪದವೀಧರರಾಗಿರುವ ರೊ. ಪಾಲಾಕ್ಷ ರವರು ಮಲ್ನಾಡ್ ಕಾಲೇಜ್ ಆಫ್ ಇಂಜಿನಿಯರಿಂಗ್ ನಲ್ಲಿ ಅಸೋಸಿ ಯೇಟ್ ಪ್ರೊಫೆಸರ್ ಮತ್ತು ವಿಭಾಗ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಬಳಿಕ ಎರಡು ಶಾಲೆಗಳನ್ನು- ಹಾಸನದಲ್ಲಿ ಚಿಂತನ ಸ್ಕೂಲ್, ಹೊಳೆನರಸೀಪುರದಲ್ಲಿ ಪ್ರಿಯದರ್ಶಿನಿ ಸ್ಕೂಲ್ ಮತ್ತು ಕಾಲೇಜ್ ನಡೆಸುತ್ತಿದ್ದಾರೆ. ಇವರು 2007ರಲ್ಲಿ ಚೀನಾದ ಬೀಜಿಂಗ್ ಮತ್ತು 2008ರಲ್ಲಿ ಸಿಂಗಾಪುರದಲ್ಲಿ ತಮ್ಮ ವಿದ್ವತ್ಪೂರ್ಣ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದವರಾಗಿ ದ್ದಾರೆ.

ರೊ.ಪಾಲಾಕ್ಷ ರವರು ರೋಟರಿ ಜಿಲ್ಲೆ 3182ರ ಅತ್ಯಂತ ಹಿರಿಯ ಕ್ಲಬ್ ಆಗಿರುವ ರೋಟರಿ ಕ್ಲಬ್ ಹಾಸನದ ಸದಸ್ಯರಾಗಿರುತ್ತಾರೆ.

ಇವರ ಪತ್ನಿ ಹಾಸನ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲೆ ರೊ. ಪುಷ್ಪವತಿ ಎಂ. ಬಿ (ರೇಖಾ), ಪುತ್ರ ಡಾ. ಚಿರಂತ್ ಗೌಡ.

# ವಲಯ ಕ್ರೀಡಾಕೂಟದಲ್ಲಿ ರೋಟರಿ ಐಸಿರಿ ಯಶಸ್ವಿನ ಸಂಭ್ರಮಾಚರಣೆ



**ರೊ. ನಾಗರಾಜ ನಾಯಕ್ – ಪ್ಲೇಯರ್ ಆಫ್ ಐಸಿರಿ**

ವಲಯ ಕ್ರೀಡಾಕೂಟದಲ್ಲಿ 400 ಮೀ ಓಟ, ಕ್ರಿಕೆಟ್ ಆಟದಲ್ಲಿ ಅಮೋಘ ಪ್ರದರ್ಶನ ನೀಡಿದ ನಮ್ಮ ಸದಸ್ಯ ರೊ. ನಾಗರಾಜ ನಾಯಕ್ ಅವರನ್ನು ಡಿಸೆಂಬರ್ 9ರಂದು ನಡೆದ ಹೊರಾಂಗಣ ಸಭೆಯಲ್ಲಿ "ಪ್ಲೇಯರ್ ಆಫ್ ಐಸಿರಿ" ಪ್ರಶಸ್ತಿ ನೀಡಿ ಗೌರವಿಸಲಾಯಿತು.



ರೋಟರಿ ಐಸಿರಿಯ ಯುವಸೇವಾ ವಿಭಾಗದಲ್ಲಿ ಕ್ರೀಡಾ ವಿಭಾಗದ ಸಂಯೋಜಕರಾಗಿರುವ ರೊ. ಅಶೋಕ್ ನಾಯಕ್ ಅವರನ್ನು ವಲಯ ಕ್ರೀಡಾಕೂಟದಲ್ಲಿ ಉತ್ತಮವಾಗಿ ರಿಟರಿ ಐಸಿರಿಯನ್ನು ಮುನ್ನಡೆಸಿದ್ದಕ್ಕಾಗಿ ಡಿಸೆಂಬರ್ 9ರಂದು ನಡೆದ ಹೊರಾಂಗಣ ಸಭೆಯಲ್ಲಿ ಗೌರವಿಸಲಾಯಿತು. ಭಾಗವಹಿಸಿದ ಮಕ್ಕಳನ್ನೂ ರೊ. ಅಶೋಕ್ ನಾಯಕ್ ಅವರು ತಮ್ಮ ವತಿಯಿಂದ ಉಡುಗೊರೆ ನೀಡಿ ಅಭಿನಂದಿಸಿದರು.

---



ಚೆಸ್ ಪಂದ್ಯಾಟದಲ್ಲಿ ಉತ್ತಮ ಪ್ರದರ್ಶನ ನೀಡಿದ ಲಾರ್ಡ್ ಡಾ. ವಿಶಾಲ್ ಭಟ್ ಅವರನ್ನು ಅಭಿನಂದಿಸಲಾಯಿತು.

ಸರಕಾರಿ ಸಂಯುಕ್ತ ಪ್ರೌಢಶಾಲೆ, ಶೆಟ್ಟಿಬೆಟ್ಟು ಇಲ್ಲಿನ ವಾರದ ವ್ಯಕ್ತಿಯಾಗಿ ರೋಟರಿ ಐಸಿರಿಯ ಸದಸ್ಯ, ಆರ್.ಸಿ.ಸಿ. ಜಿಲ್ಲಾ ಉಪಸಭಾಪತಿ ರೊ. PHF. ಗುರುಪ್ರಸಾದ್ ಕಾಮತ್ ಅವರನ್ನು ಆಹ್ವಾನಿಸಲಾಗಿತ್ತು. ರೊ. ಕಾಮತ್ ರವರು ತಮ್ಮ ಉತ್ತಮ ವಾಕ್ಪಟುತ್ವದಿಂದ ನೆರೆದ ವಿದ್ಯಾರ್ಥಿಗಳನ್ನು ಮತ್ತು ಶಿಕ್ಷಕ ವೃಂದವನ್ನು ಪ್ರಭಾವಿತರನ್ನಾಗಿಸಿದರು. ವಿದ್ಯಾರ್ಥಿಗಳಿಗೆ ಜೀವನ ಮೌಲ್ಯಗಳನ್ನು ತಿಳಿಹೇಳಿದರು.




---

ರೋಟರಿ ಐಸಿರಿಯ ಕ್ರೀಡಾ ಸಂಯೋಜಕ ರೊ. ಅಶೋಕ್ ನಾಯಕ್ ಅವರ ಕಾರ್ಯವೈಖರಿಯನ್ನು ವಲಯ ಸೇನಾನಿ ರೊ. ಸ್ಮಿತಾ ಜಿ. ಕಾಮತ್ ಅಭಿನಂದಿಸಿ ಕಳುಹಿಸಿದ ಸಂದೇಶ ಹೀಗಿತ್ತು



Rotary Aisiri
Manjunatha, Manohar, N...

Smitha Madam
Rtn Ashok Nayak sir
ಐಸಿರಿಯ ಕ್ರೀಡಾ ಕೂಟದಲ್ಲಿ ನಿಮ್ಮ ನಾಯಕತ್ವ ವಿಶಿಷ್ಟವಾದದ್ದು. ಸರಿಯಾದ ಸಮಯದಲ್ಲಿ ನಿಮ್ಮ ಪ್ರೋತ್ಸಾಹ ಹಾಗೂ ಒಳಗೊಳ್ಳುವಿಕೆ ಸದಸ್ಯರಲ್ಲಿ ಉತ್ಸಾಹ ಮೂಡಿಸಿದೆ.
ನಿಮ್ಮ ಸಹಭಾಗಿತ್ವ ಇದೇ ರೀತಿಯಲ್ಲಿ ರೋಟರಿ ಐಸಿರಿಗೆ ದೊರೆಯುತ್ತಿರಲಿ ಎಂದು ಆಶಿಸುತ್ತೇನೆ. ರೋಟರಿ ಐಸಿರಿಯ ಸದಸ್ಯನಾಗಿ ನೀವು ಸಂಘಟನೆಯ ಒಡನಾಟವನ್ನು ತುಂಬ ಮೆಚ್ಚಿಕೊಂಡಿದ್ದೀರಿ. ಇದೇ ರೋಟರಿಯ ಮೂಲ ತತ್ವ. ಇದನ್ನು ಶಿರಸಾ ಪಾಲಿಸಿ ನೀವು ಐಸಿರಿಯ ಆದರ್ಶ ಸದಸ್ಯರಾಗಿದ್ದೀರಿ ಎಂದು ಭಾವಿಸುತ್ತೇನೆ..
ಧನ್ಯವಾದಗಳು
8:58 pm



## ಬೌದ್ಧಿಕ ಸಿರಿ ಕೆಲಸ ಮಾಡದೇ ಫಲ ಸಿಗುವುದೇ!

ಒಂದೂರಿನಲ್ಲಿ ಸಲೀಲಾ ಎಂದು ಒಬ್ಬ ಯುವತಿ ಇದ್ದಳು. ಅವಳಿಗೆ ಏನೇ ಮಾಡಲು ಹೇಳಿದರೂ ಮುಖ ಸಿಂಡರಿಸಿಕೊಳ್ಳುತ್ತಿದಳು. ಕಾಲೇಜಿಗೆ ಹೋಗೆಂದರೂ, ಓದು ಎಂದರೂ, ಬೇರಾವುದೇ ಕೆಲಸ ಹೇಳಿದರೂ "ಇಷ್ಟ ಇಲ್ಲ", "ಬೇಡ", "ಬೇಸರ" ಎನ್ನುತ್ತಿದ್ದಳು. ಅವಳ ಒಳ್ಳೆಯದಕ್ಕೇ ಆದರೂ ಅವಳ ಭವಿಷ್ಯದ ದೃಷ್ಟಿಯಿಂದ ಹೇಳಿದರೂ ಕೇಳುತ್ತಿರಲಿಲ್ಲ.

ಆದರೆ, ತನಗೂ ಯಶಸ್ಸು ಬೇಕು ಎನ್ನುವ ದೊಡ್ಡ ಆಸೆ ಅವಳಿಗೆ. "ನನಗೂ ಬಹಳ ದೊಡ್ಡ ಸಮ್ಮಾನಗಳು ಬೇಕು, ದೊಡ್ಡ ಸ್ಥಾನಮಾನ ಬೇಕು, ಬಹಳ ಸಿರಿವಂತಿಕೆ ಬೇಕು " ಎಂದು ಯಾವಾಗಲೂ ಹಂಬಲಿಸುತ್ತಿದ್ದಳು.

ಒಂದು ದಿನ ಸಲೀಲಾಳ ಅಜ್ಜಿಯವರು ಅವಳನ್ನು ಹತ್ತಿರಕ್ಕೆ ಕುಳ್ಳಿರಿಸಿಕೊಂಡು ಹೇಳಿದರು: "ಸಲೀಲಾ, ನಿನಗೆ ಹೂವುಗಳೆಂದರೆ ತುಂಬಾ ಇಷ್ಟ ತಾನೇ, ಹೂವಿನ ಪರಿಮಳ ಬಯಸುತ್ತೀಯ, ಆದರೆ ತೋಟಕ್ಕೆ ಹೋಗಿ ಹೂ ಗಿಡಗಳಿಗೆ ನೀರು ಹಾಕಲು ನಿನಗೆ ಇಷ್ಟವಿಲ್ಲ. ಹೀಗಿರುವಾಗ ಗಿಡಗಳು ಹೂ ಬಿಡುತ್ತವೆ ಎಂದು ಹೇಗೆ ನಿರೀಕ್ಷಿಸುವೆ ?"

ಸಲೀಲಾ ಈ ಮಾತಿನ ಮರ್ಮ ಅದು ಹೇಗೋ ಅರ್ಥವಾಯಿತು. "ಹಾಗಾದರೆ ನಾನು ಏನು ಮಾಡಬೇಕು ಅಜ್ಜಿ?" ಎಂದು ಕೇಳಿದಳು.

ಅಜ್ಜಿ ನಗುತ ಹೇಳಿದರು, "ಕೆಲಸವನ್ನು ದ್ವೇಷಿಸಿದವನು ಅದರ ಫಲವನ್ನು ಆಕರ್ಷಿಸಲಾರನು. ತನ್ನ ಕರ್ತವ್ಯವನ್ನು ಮಾಡದವನಿಗೆ ಫಲ ಸಿಗುವುದಾದರೂ ಹೇಗೆ? ಅಂತೆಯೇ, ಹೂದೋಟದ ಗಿಡಗಳನ್ನು ಪ್ರೀತಿಯಿಂದ ಆರೈಕೆಮಾಡಿದಾಗ ಮಾತ್ರ ಹೂವುಗಳು ನಿನಗೆ ಸಿಗುತ್ತವೆ."

ಅಜ್ಜಿ ಮಾತುಗಳು ಸಲೀಲಾಳ ಮನಸ್ಸಿಗೆ ಬೇರು ಬಿಟ್ಟವು. ಆ ದಿನದಿಂದ ಅವಳು ಪ್ರತಿಯೊಂದು ಕೆಲಸವನ್ನೂ ಮುಜುಗರವಿಲ್ಲದೆ, ಸಂತೋಷದಿಂದ ಮಾಡತೊಡಗಿದಳು. ಕೆಲಸ ಕಷ್ಟವಾಗಿದ್ದರೂ, ಅವಳು ಅದನ್ನು ದ್ವೇಷಿಸಲಿಲ್ಲ. ಸಮಯ ಕಳೆದಂತೆ ಅವಳು ತನ್ನ ಕ್ಷೇತ್ರದಲ್ಲಿ ಮಿಂಚಿ, ಎಲ್ಲಾ ಬಯಸಿದ ಪ್ರಶಂಸೆ ಮತ್ತು ಯಶಸ್ಸು ಪಡೆದುಕೊಂಡಳು.

ಒಮ್ಮೆ ಜನರು ಅವಳನ್ನು ಕೇಳಿದರು: "ನಿನ್ನ ಯಶಸ್ಸಿನ ರಹಸ್ಯವೇನು?", ಸಲೀಲಾ ನಗುತ ಉತ್ತರಿಸಿದಳು:

**"ಕೆಲಸವನ್ನು ಪ್ರೀತಿಸಿದಾಗ, ಫಲ ಸ್ವತಃ ಬಂದು ಬಾಗಿಲು ತಟ್ಟುತ್ತದೆ."**

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ಡಿಸೆಂಬರ್ 9ರ ಸಭೆಯ ಛಾಯಾಚಿತ್ರಗಳು




"Unite for Good" is the unifying presidential message and theme for Rotary International for the 2025-2026 year.



## ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 22ನೇ ವಾರದ ಸಭೆ 9/12/2025 ರಂದು ಹೊರಾಂಗಣ ಸಭೆಯಾಗಿ ಶಾಂಭವಿ ಹಾಲ್ ನಲ್ಲಿ ನಡೆಯಿತು. ದಂಡಪಾಣಿ ರೊ ಕೊರಗಪ್ಪ ಶೆಟ್ಟಿಗಾರ್ ಅಧ್ಯಕ್ಷರಿಗೆ ಕೊರಳ ಲಾಂಛನ ತೊಡಿಸಿ ಅಧ್ಯಕ್ಷರು ಸಭೆಯನ್ನು ಆರಂಭಿಸಿದರು. ರೋಟರಿ ಐಸಿರಿಯ ಅಧ್ಯಕ್ಷರಾದ ರೊ ಅನಿಲ್ ಕುಮಾರ್ ಅವರು ಸಭೆಯನ್ನು ಸ್ವಾಗತಿಸಿದರು. ಜೊತೆ ಕಾರ್ಯದರ್ಶಿ ರೊ ಗುರುಪ್ರಸಾದ್ ಕಾಮತ್ ಅವರು ಕಳೆದ ವಾರದ ವರದಿಯನ್ನು ಮಂಡಿಸಿದರು.

ರೊ. ಮಂಜುನಾಥ್ ಉಪಾಧ್ಯ ಅವರು ವಲಯ ಕ್ರೀಡಾಕೂಟದ ಸಾಧನೆಯನ್ನು ಪ್ರಶಂಸಿಸಿದರು. ಜಿಲ್ಲಾ ಗವರ್ನರ್ ಅಧಿಕೃತ ಭೇಟಿಗೆ ಶುಭ ಹಾರೈಸಿದರು. ಸದಸ್ಯರು ಐಸಿರಿಗೆ ಕೊಡುತ್ತಿರುವ ಸಮಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು

ರೊ. ಎ. ಗಣೇಶ್ ಅವರು ಕಳೆದ ತಿಂಗಳ ಆಯವ್ಯಯ ಪಟ್ಟಿಯನ್ನು ಮಂಡಿಸಿದರು. ಸ್ಪೋರ್ಟ್ಸ್ ಕಾರ್ಡಿನೇಟರ್ ರೊ. ಅಶೋಕ್ ನಾಯಕ್ ಅವರ ಕಾರ್ಯವೈಖರಿ ಹಾಗೂ ಅಧ್ಯಕ್ಷರ ಕಾರ್ಯಕ್ಷಮತೆಯನ್ನು ಹೊಗಳಿದರು. ರೊ. ಪ್ರಭಾಕರ್ ಯು. ರೆಂಜಾಳ ಅವರು ಮಕ್ಕಳ ಭಾಗವಹಿಸುವಿಕೆಯನ್ನು ಅಭಿನಂದಿಸಿದರು. ರೊ. ಸುನಿಲ್ ಕುಮಾರ್ ಅವರು ವಲಯ ಕ್ರೀಡಾಕೂಟದಲ್ಲಿ ಅರಳಿದ ಸುಪ್ತ ಪ್ರತಿಭೆಗಳಾದ ನಾಗರಾಜ್ ನಾಯಕ್, ಸಂದೀಪ್ ಕುಮಾರ್ ಮತ್ತು ಅಶೋಕ್ ನಾಯಕ್ ಅವರನ್ನು ಅಭಿನಂದಿಸಿದರು.

ವಾರದ ಬುಲೆಟಿನ್ ಐಶ್ವರ್ಯ ದ 23ನೇ ಸಂಚಿಕೆಯನ್ನು ರೊ. ಅಶೋಕ್ ನಾಯಕ್ ಬಿಡುಗಡೆ ಗೊಳಿಸಿದರು. ಸಂಪಾದಕರಾದ ರೊ. ರಾಜೇಶ್ ಡಿ. ಶೆಣೈ ಸಹಕರಿಸಿದರು. ರಾಜೇಶ್ ಶೆಣೈ ಅವರು ಜಿಲ್ಲಾ ಗವರ್ನರ್ ಅಧಿಕೃತ ಭೇಟಿಯ ಸಂಪೂರ್ಣ ವೇಳಾಪಟ್ಟಿಯನ್ನು ರಚಿಸಿ ಮಂಡಿಸಿದರು. ಅಲ್ಲದೆ ಐಶ್ವರ್ಯ ವಾರದ ಸಂಚಿಕೆಯನ್ನು public image ಗೆ ಬಳಸಿಕೊಳ್ಳುವಂತೆ ಸೂಚಿಸಿದರು.

ವಲಯ ಕ್ರೀಡಾಕೂಟ ರೊಟಾ ಕ್ರೌನ್ ನಲ್ಲಿ ಬಹುಮಾನ ಪಡೆದ ಎಲ್ಲ ಸ್ಪರ್ಧಾಳುಗಳನ್ನು ಅಭಿನಂದಿಸಲಾಯಿತು. ವಿಶೇಷವಾಗಿ ಭಾಗವಹಿಸಿದ ಮಕ್ಕಳನ್ನು ರೊ. ಅಶೋಕ್ ನಾಯಕ್ ಅವರು ಉಡುಗೊರೆ ನೀಡಿ ಅಭಿನಂದಿಸಿದರು. ಸ್ಪೋರ್ಟ್ಸ್ ಕಾರ್ಡಿನರ್ ರೊ. ಅಶೋಕ್ ನಾಯಕ್ ಅವರು ಎಲ್ಲ ಸ್ಪರ್ಧಾಳುಗಳನ್ನು ಅಭಿನಂದಿಸಿ ವಲಯ ಕ್ರೀಡಾಕೂಟದ ವಿಶೇಷ ಅನುಭವಗಳನ್ನು ಹಂಚಿಕೊಂಡರು.

ರೊ. ಸ್ಮಿತಾ ಜಿ. ಕಾಮತ್ ಅವರು ಗವರ್ನರ್ ಅಧಿಕೃತ ಭೇಟಿಗೆ ಶುಭಕೋರಿದರು. ವಲಯ ಕ್ರೀಡಾಕೂಟದ ಸಾಧನೆಯನ್ನು ಪ್ರಶಂಸಿಸಿದರು. ಅಧ್ಯಕ್ಷರು ಉತ್ತಮ ಸಂಯೋಜನೆಗಾಗಿ ರೊ. ಅಶೋಕ್ ನಾಯಕ್ ಅವರನ್ನು ಗುರುತಿಸಿ ಗೌರವಿಸಿದರು. ರೊ. ನಾಗರಾಜ್ ನಾಯಕ್ ಅವರ ಅಭೂತಪೂರ್ವ ಕ್ರೀಡಾ ಪ್ರದರ್ಶನಕ್ಕಾಗಿ ಅವರನ್ನು Player of Aisiri ಎಂಬ ನಾಮಾಂಕಿತದೊಂದಿಗೆ ಗುರುತಿಸಿ ಗೌರವಿಸಲಾಯಿತು.

ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಅವರು DG ವಿಸಿಟ್ ನಲ್ಲಿ ಎಲ್ಲ ಸದಸ್ಯರೂ ತಪ್ಪದೆ ಹಾಜರಿದ್ದು ಈ ಸಭೆಯನ್ನು ಯಶಸ್ವಿಗೊಳಿಸಲು ಕರೆ ನೀಡಿದರು. ವಲಯ ಕ್ರೀಡಾಕೂಟದ ಸಾಧನೆಯನ್ನು ಪ್ರಶಂಸಿಸಿ ಅನುಭವಗಳನ್ನು ಹಂಚಿಕೊಂಡರು.

ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಅವರು ಸದಸ್ಯರೆಲ್ಲರ ಸಹಕಾರ ಮತ್ತು ಕುಟುಂಬದ ಸಹಕಾರವನ್ನು ಪ್ರಶಂಸಿಸಿದರು. ಜಿಲ್ಲಾ ಗವರ್ನರ್ ಅಧಿಕೃತ ಭೇಟಿಯ ಪೂರ್ವತಾಯರಿ ಬಗ್ಗೆ ಮಾಹಿತಿ ನೀಡಿದರು.

Lucky person ಆಯ್ಕೆಯನ್ನು ಜೋನ್ ಪ್ರಹರ್ಷ ಅವರು ನಡೆಸಿಕೊಟ್ಟರು. ಕುಮಾರಿ ಗಾನವಿ ಅದೃಷ್ಟಶಾಲಿಯಾಗಿ ಆಯ್ಕೆಯಾದರು. ಅಧ್ಯಕ್ಷರು ಸಭೆಯನ್ನು ಮುಂದೂಡಿ ದಂಡಪಾಣಿ ಕೊರಳ ಲಾಂಛನ ತೆಗೆದರು. ಸಹಭೋಜನದೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 23ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕದ ಇಪ್ಪತ್ತಮೂರನೇ ಸಂಚಿಕೆಯನ್ನು ರೊ. ಅಶೋಕ್ ನಾಯಕ್ 09/12/2025ರಂದು ಬಿಡುಗಡೆಗೊಳಿಸಿದರು.



ರೋಟರಿ ಐಸಿರಿಯ 22ನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ಜೋನ್ ಪ್ರಹರ್ಷ ನಡೆಸಿ, ಕುಮಾರಿ ಗಾನವಿ ಅದೃಷ್ಟಶಾಲಿಯಾಗಿ ಆಯ್ಕೆಯಾದರು.

**The Four-Way Test** of the things

ರೋಟರಿಯ ಚತುರ್ವಿಧ ಪರೀಕ್ಷೆ ಎಂದರೆ ನಾವು ಯೋಚಿಸುವ, ಹೇಳುವ ಅಥವಾ ಮಾಡುವ ವಿಷಯಗಳನ್ನು ಪರೀಕ್ಷಿಸಲು ಬಳಸುವ ನಾಲ್ಕು ಪ್ರಶ್ನೆಗಳ ನೀತಿ:

1. ಅದು ನಿಜವೇ?
2. ಅದು ನ್ಯಾಯವೇ?
3. ಅದು ಸದ್ಭಾವನೆಯನ್ನು ಹೆಚ್ಚಿಸುವುದೇ?
4. ಅದು ಎಲ್ಲರಿಗೂ ಪ್ರಯೋಜನಕಾರಿಯಾಗುವುದೇ?

ಇದನ್ನು ಸದ್ಭಾವನೆ ಮತ್ತು ವಿಶ್ವಾಸವನ್ನು ಹೆಚ್ಚಿಸಲು ಮತ್ತು ಸಂಘರ್ಷ ಬಗೆಹರಿಸಲು ಬಳಸುತ್ತಾರೆ. ಈ ಪರೀಕ್ಷೆಯು ರೋಟರಿಯನ್ನರಿಗೆ ನೈತಿಕ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತದೆ.